ದಿನಾಂಕ 14-03-2025 ರಂದು ಸಾಕ್ಷಿಯನ್ನು ಮರಳಿ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟಿಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಬಿ.ಹೆಚ್ ವಕೀಲರಿಂದ**

15) ನಾನು ನಿಪಿ-4 ರಲ್ಲಿ ಆರೋಪಿತನ ಕೋಣೆಗೆ ನಾನು 2 ಗಂಟೆಗೆ ಹೋಗಿರುವುದಾಗಿ ಹೇಳಿದ್ದೇನೆ ಎಂದರೆ ನಿಜ. ಆರೋಪಿ ದಿನಾಂಕ 16-03-2019 ರಂದು ಲಂಚದ ಹಣವನ್ನು ಕೇಳಿದ್ದು ನೆನಪಿಲ್ಲ, ಆದರೆ 15 ರಂದು ಕೇಳಿದ್ದರು. ಆರೋಪಿ ನಮ್ಮ ಬಳಿ ಲಂಚದ ಹಣವನ್ನು ಕೇಳಿದ್ದರೆಂದು ತಾರೀಕು 16-03-2019 ರ ಲಿಪಿಕರಿಸಿದ ಸಂಭಾಷಣೆಯಲ್ಲಿ ಇಲ್ಲ ಎಂದರೆ, ಸರಿ ಇರಬಹುದು. ಆದಿನ ನಾನು ಸುಮಾರು ಮೂರು ಜನರೊಂದಿಗೆ ಮಾಡಿದ ಸಂಭಾಷಣೆ ರೆಕಾರ್ಡ ಆಗಿದೆ ಎಂದರೆ ಇರಬಹುದು. ಪೊಲೀಸರು ಲಿಪಿಕರಿಸಿದ ಸಂಭಾಷಣೆಯಲ್ಲಿ ಇರುವ ಎಲ್ಲಾ ಸಂಭಾಷಣೆಯನ್ನು ಲಿಪಿಕರಿಸಿಲ್ಲ ಎಂದರೆ ಸರಿಯಲ್ಲ. ಅವರ ತನಿಖೆಗೆ ಅನುಕೂಲವಾಗುವಂತಹ ಸಂಭಾಷಣೆಯನ್ನು ಮಾತ್ರವೇ ಲಿಪಿಸಿಕರಿಸಿದ್ದಾರೆ ಎಂದರೆ ಸರಿಯಲ್ಲ. ನಾನು ತನಿಖಾಧಿಕಾರಿಯ ಮುಂದೆ ದಿನಾಂಕ 16-03-2019 ರಂದು 1 ನೇ ಆರೋಪಿ ನನ್ನ ಬಳಿ ಹಣ ಕೇಳಿಲ್ಲ ಎಂದು ಹೇಳಿರುವುದು ಲಿಪಿಕರಿಸಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಟ್ರ್ಯಾಪ್ ಪಂಚನಾಮೆಯನ್ನು ವೀಡಿಯೋ ಮಾಡಿದ್ದರು. ಅದನ್ನು ಹಾಜರುಪಡಿಸಿಲ್ಲ ಎಂದರೆ, ಇರಬಹುದು.

16) 2 ನೇ ಅರೋಪಿತನನ್ನು ಮೊದಲು ಹೊರಗೆ ಕರೆದುಕೊಂಡು ಹೋಗಿ ಬಂದ ನಂತರ ಕೈತೊಳೆಸಿದ್ದಾರೆ ಎಂದರೆ ಸರಿಯಲ್ಲ. ಕೈ ತೊಳೆದ ನಂತರ ಹೊರಗೆ ಕರೆದುಕೊಂಡು ಹೋಗಿದ್ದರು. ಆರೋಪಿ ಬಲ ಕೈಯಿಂದ ಹಣವನ್ನು ಪಡೆದಿದ್ದರು. ಆರೋಪಿ ಪಡೆದ ಹಣವನ್ನು ಎರಡು ಕೈಗಳಿಂದ ಲೆಕ್ಕ ಮಾಡಿದ್ದರು ಎಂದರೆ ನಿಜ. ತಾರೀಕು 16-03-2019 ರ ಮಾತುಕತೆ ಕೂಡ ಡಿ.ವಿ.ಆರ್ ನ ರೆಕಾರ್ಡಿಂಗ್ ನಲ್ಲಿ ದಾಖಲಾಗಿದೆ. ಆದಿನ ನಾನು ಪಡೆದ ದಾಖಲೆಗಳಿಗೆ ಸಹಿ ಮಾಡಿ ಪಡೆದಿದ್ದೇನೆ ಎಂದರೆ ನಿಜ. ಆದಿನ ದಿನಾಂಕವನ್ನು ಸಹ ನಮೂದು ಮಾಡಿದ್ದೆ. ಆದಿನ ಲೆಡ್ಜರ್ ಗೂ ಕೂಡ ಸಹಿ ಮಾಡಿದ್ದೆ. ನನಗೆ ಈಗ ತೋರಿಸಿದ ನಿಪಿ-3 ರ ದಾಖಲೆಗೆ ಆರೋಪಿಯ ಕಚೇರಿಗೆ

ಹೋಗುವ ಮೊದಲು ಸಹಿ ಹಾಕಿಲ್ಲ. ಆದಿನ ನಾನು ಡಿ.ಡಿ ಪಡೆದಿರುವುದಕ್ಕಾಗಿ ಸಹ ಸಹಿ ಮಾಡಿದ್ದೆ. ಆದಿನ ನಾನು ಮಹಜರು ಮತ್ತು ಸಂಬಂಧಿತ ದಾಖಲಾತಿಗಳಿಗೆ ಮಾತ್ರವೇ ಸಹಿ ಮಾಡಿದ್ದೇನೆ. ಆದಿನ ಡಿ.ಡಿ ಯನ್ನು ಎಲ್ಲಿ ಪಡೆದಿದ್ದೇನೆ ಎಂದು ಈಗ ನೆನಪಿಲ್ಲ. ಆಗ ಚಾಸಾ-4 ನನ್ನೊಂದಿಗೆ ಇದ್ದರು.

17) 1 ನೇ ಅರೋಪಿ 4 ಸಾವಿರ ರೂಪಾಯಿಗಳ ಹಣವನ್ನು ಕೇಳಿದ್ದರು ಎಂಬ ವಿಚಾರ ಯಾವುದೇ ಧ್ವನಿ ಮುದ್ರಣಗಳಲ್ಲಿ ಇಲ್ಲ ಎಂದರೆ, ಅದು 6 ಸಾವಿರ ರೂಪಾಯಿಗಳಿಗಾಗಿ 15 ನೇ ತಾರೀಕಿನಂದು ಇತ್ತು. ನನಗೆ ಆದಿನ ಕೊಡಲು 6 ಸಾವಿರ ರೂಪಾಯಿಗಳಷ್ಟು ಹಣ ನನ್ನ ಬಳಿಯಲ್ಲಿ ಇರಲಿಲ್ಲ. ಆರೋಪಿ ನನ್ನ ಬಳಿ ಹಣವನ್ನು ಕೇಳಿಲ್ಲ ಎಂದರೆ ಸರಿಯಲ್ಲ. ಪೊಲೀಸರು ನನಗೆ ಡಿ.ವಿ.ಆರ್ ಎಂಒ-12 ರಲ್ಲಿಯ ಎಲ್ಲಾ ದ್ರಶ್ಯಾವಳಿಗಳನ್ನು ತೋರಿಸಿದ್ದರು ಎಂದರೆ ನಿಜ. ಅದನ್ನು ವೇಗವಾಗಿ ತೋರಿಸಿದ್ದರು. 1 ನೇ ಅರೋಪಿ ಹಣವನ್ನು ಇಲ್ಲಿಯೇ ಇಟ್ಟು ಕಡತ ಪಡೆದುಕೊಳ್ಳಿ ಎಂದು ಆದಿನ ನನಗೆ ಹೇಳಿಲ್ಲ. ವಾಯ್ಸ ರೆಕಾರ್ಡರ್ ನ ಧ್ವನಿ ಮುದ್ರಣಗಳನ್ನು ಪೊಲೀಸರು ನನಗೆ ಕೇಳಿಸಿಲ್ಲ.

18) ನನಗೆ ರಿಪಂಡ್ ಆರ್ಡರ್ ಮತ್ತು ಆರ್ಡರ್ ನ ಪ್ರತಿಗಳು ನನಗೆ ಆದಿನವೇ ಸಿಕ್ಕಿದೆ ಎಂದರೆ ನಿಜ. ಅವುಗಳನ್ನು ನನಗೆ ಮುನ್ನ ಕೊಟ್ಟಿದ್ದರು. ನನಗೆ ದಾಖಲೆಗಳನ್ನು 2 ನೇ ಅರೋಪಿ ಕೊಟ್ಟಿದ್ದರು ಎಂಬುದನ್ನು ನಾನು ಪೊಲೀಸರಿಗೆ ಹೇಳಿಲ್ಲ. ನಾನು 1 ನೇ ಅರೋಪಿಯ ಕಚೇರಿಗೆ ಹೋಗುವುದಾಗಿ 2 ನೇ ಆರೋಪಿಯೊಂದಿಗೆ ಪೋನ್ ಸಂಭಾಷಣೆ ಮಾಡಿಲ್ಲ. ನಾನು ಕೇಳಿದ ದಾಖಲೆಗಳನ್ನು ನನಗೆ ಕುದ್ದಾಗಿ ಕೊಡಬೇಕೊ, ಅಥವಾ ಅಂಚೆ ಮೂಲಕ ಕಳುಹಿಸಬೇಕೋ ಎಂದು ನನಗೆ 2 ನೇ ಅರೋಪಿ ಕೇಳಿದ್ದರು. ಈ ಸಂಭಾಷಣೆಯ ನಂತರವೇ ಪೊಲೀಸರು ಟ್ರ್ಯಾಪ್ ಮಾಡಿ ಹಿಡಿದಿದ್ದು ಇರುತ್ತದೆ. ಈ ಸಂಭಾಷಣೆಯ ಆಗುವ ಮೊದಲು ಒಮ್ಮೆ 1 ನೇ ಆರೋಪಿಯ ಕೋಣೆಗೆ ಹೋಗಿದ್ದೆ. ಈ ರೀತಿ ಎರಡು ಬಾರಿ 1 ನೇ ಅರೋಪಿತನ ಕೋಣೆಗೆ ಹೋಗಿದ್ದೇನೆ ಎಂದು ತನಿಖಾಧಿಕಾರಿ ನನ್ನ ಹೇಳಿಕೆ ಪಡೆದಾಗ ಹೇಳಿಲ್ಲ ಎಂದರೆ ಸರಿಯಲ್ಲ. ನಾನು 1 ನೇ ಅರೋಪಿಯ ಕೋಣೆಗೆ ಎರಡು ಬಾರಿ ಹೋಗಿದ್ದೇನೆ ಎಂದು ಇದೇ ಮೊದಲ ಬಾರಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

19) ನನಗೆ ನನ್ನ ದಾಖಲೆಗಳನ್ನು 1 ನೇ ಆರೋಪಿಯ ಕೋಣೆಯಲ್ಲಿ 2 ನೇ ಆರೋಪಿ ನೀಡಿದ್ದ. ಆರೋಪಿತರು ನನಗೆ ದಾಖಲೆಗಳನ್ನು ಕೊಟ್ಟ ಮತ್ತು ಆ ಸಮಯದಲ್ಲಿ ಆದ ಸಂಭಾಷಣೆಗಳು ನನ್ನ ಬಳಿ ಇದ್ದ ವಾಯ್ಸು ರೆಕಾರ್ಡರ್ ಮತ್ತು ಎಂಒ-12 ರ ಡಿ.ವಿ.ಅರ್ ನಲ್ಲಿ ದಾಖಲಾಗಿದೆ ಎಂದರೆ ನಿಜ. ಆದಿನ 1 ನೇ ಅರೋಪಿಯ ಕೋಣೆಯಲ್ಲಿ ನಾನು ಸುಮಾರು 15 ನಿಮಿಷಗಳ ಅವಧಿಯಷ್ಟು ಇದ್ದೆ. 16 ನೇ ತಾರೀಕಿನಂದು ನನ್ನ ಕೆಲಸಕ್ಕಾಗಿ ನಾನು 1 ನೇ ಆರೋಪಿತನ ಬಳಿ ಮಾತನಾಡಿದ್ದೆ. ಆಗ ನಾನು 1 ನೇ ಆರೋಪಿಗೆ ಆತ ಹಿಂದಿನ ದಿನ ಕೇಳಿದ್ದರಿಂದ ಹಣ ತೆಗೆದುಕೊಳ್ಳಿ ಎಂದು ನಾನು ಹೇಳಿದ್ದೆ. ಆ ಸಂಭಾಷಣೆ ನಿಪಿ-4 ರ 7 ನೇ ಪುಟದಲ್ಲಿ ಇದೆ. ಆಗ ಆರೋಪಿ ''ಬೇಡಾ, ಬಿಡು ಮಾರಾಯಾ'' ಎಂದು ಹೇಳಿದ್ದರು ಎಂದರೆ ನಿಜ. ನಂತರ 2 ನೇ ಆರೋಪಿಯ ಬಳಿ ಕೊಡಲು ಹೇಳಿದ್ದರು. ನಾನು 16 ನೇ ತಾರೀಕಿನಂದು 1 ನೇ ಆರೋಪಿಯ ಕಚೇರಿಗೆ ಹೋಗುವಾಗ ಯಾವುದೇ ದಾಖಲೆಗಳನ್ನು ತೆಗೆದುಕೊಂಡು ಹೋಗಿರಲಿಲ್ಲ.

20) ನಾನು ಎ.ಸಿ.ಬಿ ಕಚೇರಿಗೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ 2 -3 ಬಾರಿ ಹೋಗಿದ್ದೇನೆ. ಅಲ್ಲಿ ಮಹಜರಿಗೆ 4–5 ಸಹಿಗಳನ್ನು ಪಡೆದಿರಬಹುದು. ನಾನು 1 ನೇ ಆರೋಪಿಯ ಕಚೇರಿಯಲ್ಲಿ ಯಾವುದೇ ಸಹಿಗಳನ್ನು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಎ.ಸಿ.ಬಿ ಪೊಲೀಸರೊಂದಿಗೆ ಸೇರಿ 1 ನೇ ಅರೋಪಿ ಯಾವುದೇ ಹಣ ಕೇಳಿರದೇ ಇದ್ದರೂ ಸಹ ಒಂದು ಸುಳ್ಳು ದೂರು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 15-03-2019 ರಂದು ನನ್ನ ಮತ್ತು 1 ನೇ ಆರೋಪಿಯ ನಡುವೆ ಯಾವುದೇ ಸಂಭಾಷಣೆ ಆಗಿಲ್ಲ ಎಂದರೆ ಸರಿಯಲ್ಲ. ಎಂಒ-1 ನ್ನು ಪೊಲೀಸರೊಂದಿಗೆ ಸೇರಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಎಂಒ-12 ರ ದ್ರಶ್ಯಾವಳಿಗಳನ್ನು ಸಾಕ್ಷಿದಾರರಿಗೆ ತೋರಿಸಿ ಪ್ರಶ್ನೆ ಕೇಳಬೇಕಾಗಿರುವುದಾಗಿ ತಿಳಿಸಿದ್ದು, ಎಂಒ-12 ನ್ನು ಪಿ.ಡಬ್ಲ್ಯು-4 ಇವರ ಸಹಾಯದಿಂದ ಮಾತ್ರವೇ ನೋಡಲು ಸಾಧ್ಯ ಎಂದು ನ್ಯಾಯಾಲಯದ ಸಾಫ್ಟವೇರ್ ಟೆಕ್ನಿಷಿಯನ್ ತಿಳಿಸಿದ್ದು, ಅದರಂತೆ ಆದೇಶವನ್ನು ಸಹ ಮಾಡಿರುತ್ತದೆ. ಬೆಳಗ್ಗಿನ 11-45 ರ ನಂತರ 1-25 ರವರೆಗೆ ವಿಶೇಷ ಅಭಿಯೋಜಕರು ಈ ದಿನ ಪಿ.ಡಬ್ಲ್ಯು-4 ಈತನನ್ನು

ಕರೆಯಿಸಿಕೊಳ್ಳಲು ಆಗುವುದಿಲ್ಲವೆಂದು, ನಾಳೆ ತಾರೀಕು 15 ರಂದು ಸದರಿ ಸಾಕ್ಷಿಯನ್ನು ಇಲಾಖಾ ಮೂಲಕ ಹಾಜರು ಇಡುವುದಾಗಿ ತಿಳಿಸಿರುತ್ತಾರೆ. ಆದ್ದರಿಂದ ಹೆಚ್ಚಿನ ಪಾಟೀಸವಾಲನ್ನು ತಲಾ 1 ಸಾವಿರ ರೂಪಾಯಿಗಳ ಖರ್ಚಿನಲ್ಲಿ ಮುಂದೂಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಕೆ.ಎಸ್.ಗಂಗಣ್ಣವರ್)
ಸತ್ರ ನ್ಯಾಯಾಧೀಶರು/ವಿಶೇಷ ನ್ಯಾಯಾಧೀಶರು
ಉಡುಪಿ